# ಪರಿವರ್ತನಪರ ಧರ್ಮಸಂಸತ್ ಸಭೆ

**ಚಿತ್ರದುರ್ಗ, ಡಿ. 6** : ಹಲವಾರು ಕಡೆ ಲಿಂಗಾಯತರು ಮತಾಂತರ ಆಗುತ್ತಿರುವುದು ವಿಷಾದನೀಯ. ಎಲ್ಲ ಜಾತಿಗಳ ಧಾರ್ಮಿಕರಲ್ಲಿ ರಾಜಕೀಯ ಮತ್ತು ಧಾರ್ಮಿಕ ಶಕ್ತಿ ಬಂದಿದೆ. ಅಸ್ಪøಶ್ಯತೆ ಮತ್ತು ಮತಾಂತರವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಾವು ಸಾಗಬೇಕಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಶ್ರೀ ಶಿರಸಂಗಿ ಮಹಾಲಿಂಗಸ್ವಾಮಿ ಸಭಾಂಗಣದಲ್ಲಿ ನಡೆದ ಪರಿವರ್ತನಪರ ಧರ್ಮಸಂಸತ್ ಸಭೆಯಲ್ಲಿ ಅಸ್ಪøಶ್ಯತಾ ನಿವಾರಣೆ ಹಾಗು ಮತಾಂತರ ತಡೆ ವಿಷಯ ಚರ್ಚೆಯಲ್ಲಿ ಮಾತನಾಡಿದ ಶ್ರೀಗಳು, ಇಂದು ಡಾ. ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣದಿನ. ಈ ದಿನದಂದು ನಾವು ಅವರ ಚೈತನ್ಯಭೂಮಿಗೆ ಭೇಟಿ ಕೊಟ್ಟಿದ್ದೆವು. ಬಸವಣ್ಣ, ಬುದ್ಧ, ಗಾಂಧಿ ಮೊದಲಾದವರು ಸಾವಿನ ನಂತರವೂ ದೈವತ್ವಕ್ಕೇರಿದ್ದಾರೆ. ಏಸುಕ್ರಿಸ್ತನ ಪುಣ್ಯಭೂಮಿ ಜೆರುಸಲೇಂ, ಬುದ್ಧನ ಪುಣ್ಯಭೂಮಿ ಲುಂಬಿನಿವನ ಮೊದಲಾದ ಕಡೆ ಭೇಟಿ ಕೊಡಲಾಗಿದೆ. ಗಾಂಧೀಜಿಯವರು ಸಹ ಹೇಗೆ ಸಂತರಾಗಿದ್ದರೆಂಬುದು ನಮಗೆ ಅವರ ಪುಣ್ಯಭೂಮಿ ರಾಜಘಾಟ್‍ಗೆ ಭೇಟಿ ಕೊಟ್ಟಾಗ ತಿಳಿಯಿತು. ಪರಿವರ್ತನಪರ ಧರ್ಮಸಂಸತ್ ಮೂಲಕ ಜನಪರ ಕಾರ್ಯಕ್ರಮಗಳು ಆಗಬೇಕಿದೆ. ನಮ್ಮಿಂದ ದೀಕ್ಷೆ ಪಡೆದ ಸ್ವಾಮಿಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡುತ್ತಿದ್ದಾರೆ. ಅದರಿಂದ ಸಾಮರಸ್ಯ ಮೂಡಿದೆ ಎಂದು ನುಡಿದರು.

ಮಾದಾರಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು ಮಾತನಾಡಿ, ಎಲ್ಲ ಜಾತಿಗಳಲ್ಲು ಮತಾಂತರ ನಡೆಯುತ್ತಿದೆ. ಇಂದು ಸರ್ಕಾರ ಎಲ್ಲ ಸೌಲಭ್ಯಗಳನ್ನು ಕೊಡುತ್ತಿದೆ. ಆದರೆ ಹಿಂದೆ ಕೆಲ ಜಾತಿಯವರಿಗೆ ಆಸೆ ತೋರಿಸಿ ಅವರನ್ನು ಮತಾಂತರಗೊಳಿಸುತ್ತಿದ್ದರು. ಆದರೆ ಇಂದು ಅಂತಹ ಸಂದರ್ಭ ಇಲ್ಲ. ಗೂಳಿಹಟ್ಟಿ ಶೇಖರ್ ಅವರ ತಾಯಿ ಮತಾಂತರ ಆಗಲು ಕಾರಣವೇನು? ಎಂಬುದನ್ನು ಹುಡುಕಬೇಕಿದೆ. ಜಾಗತಿಕ ಮಟ್ಟದಲ್ಲಿ ಕ್ರೈಸ್ತರು, ಮುಸ್ಲಿಂರು ತಮ್ಮ ಧರ್ಮ ದೊಡ್ಡದಾಗಿ ಬೆಳೆಯಬೇಕೆಂಬ ಆಶಯದಿಂದ ಮತಾಂತರದಂತಹ ಕಾರ್ಯಗಳನ್ನು ಮಾಡುತ್ತಿದ್ದಾರೆ. ನಾವಿಲ್ಲಿ ಸೇರಿರುವ ಎಲ್ಲ ಮಠಾಧೀಶರು ಯಾರಿಗೆ ತೊಂದರೆ ಆದರೂ ಅದನ್ನು ಬಹಿಷ್ಕರಿಸುವ ವ್ಯವಸ್ಥೆ ಬೆಳೆಯಬೇಕು. ಮತಾಂತರ ತಡೆ ಎನ್ನುವುದು ರಾಷ್ಟ್ರಮಟ್ಟಕ್ಕೆ ಸಂದೇಶ ಹೋಗಬೇಕಿದೆ. ಭಾರತದ ಧರ್ಮ ಉಳಿಸಬೇಕು. ನಮ್ಮ ಸಮಾಜವನ್ನು ಉಳಿಸುವ ನಿಟ್ಟಿನಲ್ಲಿ ಸಾಗಬೇಕಿದೆ. ನಾವೆಲ್ಲರು ಸೇರಿ ಒಗ್ಗಟ್ಟಾಗಿ ಸಾಗಿದರೆ ಮತಾಂತರ ತಡೆಗಟ್ಟಬಹುದು ಎಂದು ನುಡಿದರು.

ಭಗೀರಥ ಗುರುಪೀಠದ ಶ್ರೀ ಪುರುಷೋತ್ತಮಾನಂದಪುರಿ ಸ್ವಾಮಿಗಳು ಮಾತನಾಡಿ, ಕ್ರಿಶ್ಚಿಯನ್ ಹಾಗು ಇಸ್ಲಾಂ ಧರ್ಮದವರು ಜಾಗತಿಕ ಮಟ್ಟದಲ್ಲಿ ಮತಾಂತರ ಮಾಡುತ್ತಿದ್ದಾರೆ. ಈ ಮೊದಲು ಶೋಷಣೆ ಹಾಗು ಬಡತನದಿಂದ ಮತಾಂತರ ಆಗುತ್ತಿದ್ದರು. ನಮ್ಮ ಸಮುದಾಯಗಳಲ್ಲಿ ಆಗುತ್ತಿರುವ ಮತಾಂತರವನ್ನು ತಡೆಯಬೇಕಿದೆ. ಬೋಸೆದೇವರಹಟ್ಟಿ, ಹಿರಿಯೂರು ಮೊದಲಾಗಿ ಅನೇಕ ಕಡೆಗಳಲ್ಲಿ ಮತಾಂತರ ಗೊತ್ತಿಲ್ಲದೆ ನಡೆಯುತ್ತಿದೆ. ಎಲ್ಲೆಲ್ಲಿ ಮತಾಂತರವಾಗಿದ್ದಾರೋ ಅವರನ್ನು ಮತ್ತೆ ಸ್ವಜಾತಿಗೆ ಕರೆತರುವ ಪ್ರಯತ್ನ ಮಾಡೋಣವೆಂದರು.

ತಿಪಟೂರು ಶ್ರೀ ರುದ್ರಮುನಿ ಸ್ವಾಮಿಗಳು ಮಾತನಾಡಿ, ಮತಾಂತರ ಅನ್ನುವುದೇ ದೇಶದ ದೊಡ್ಡ ಪಿಡುಗು. ನಮ್ಮ ಸುತ್ತಮುತ್ತ ಗುಪ್ತವಾಗಿ ನಡೆಯುತ್ತಿದೆ. ಫಾದರ್ ಹಾಗೂ ಫಾಸ್ಟರ್‌ಗಳು ಮತಾಂತರ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಅದನ್ನು ಪರಿವರ್ತನಪರ ಧರ್ಮಸಂಸತ್ ತಡೆಯುವ ಪ್ರಯತ್ನ ಮಾಡಬೇಕಿದೆ ಎಂದರು.

ಶ್ರೀ ಬಸವಭೃಂಗೇಶ್ವರ ಸ್ವಾಮಿಗಳು ಮಾತನಾಡಿ, ಬೇರೆ ಧರ್ಮದವರು ನೀಡುವ ಸಹಕಾರವನ್ನು ನಾವು ನೀಡಿದರೆ ಯಾರು ಮತಾಂತರಗೊಳ್ಳುವುದಿಲ್ಲ. ನಮ್ಮಲ್ಲಿ ಸೇವಾಮನೋಭಾವ ಇರಬೇಕು ಎಂದು ಹೇಳಿದರು.

ಶ್ರೀ ಬಸವ ಹರಳಯ್ಯ ಸ್ವಾಮಿಗಳು ಮಾತನಾಡಿ, ಇಂದು ಜಾತಿ ಜೀವಂತವಾಗಿದೆ. ಪ್ರತಿಹಳ್ಳಿಗೂ ಶರಣರ ವಿಚಾರಧಾರೆಗಳನ್ನು ಕೊಂಡೊಯ್ಯಬೇಕು. ಬೋವಿ, ಲಂಬಾಣಿ, ಮಾದಿಗ ಮೊದಲಾದವರು ಹೆಚ್ಚು ಮತಾಂತರ ಆಗುತ್ತಿದ್ದು, ಮತಾಂತರವನ್ನು ತಡೆಯಲು ನಾವೆಲ್ಲರು ಒಗ್ಗಟ್ಟಿನಿಂದ ಹೋರಾಡಬೇಕಿದೆ. ದೆಹಲಿಯ ಮಹಾಂತ ಸ್ವಾಮಿಗಳು ಮಾತನಾಡಿ, ಜಾತಿ ವ್ಯವಸ್ಥೆಯಿಂದ ನಮ್ಮಲ್ಲಿ ಮತಾಂತರ ಹೆಚ್ಚಾಗಿದೆ. ಜಾತಿ ವ್ಯವಸ್ಥೆ ತೊಲಗಬೇಕು. 21ನೇ ಶತಮಾನದಲ್ಲಿ ಮುರುಘಾ ಶರಣರು ನಮ್ಮಂತಹ ಎಲ್ಲರನ್ನು ಕಟ್ಟಿಕೊಂಡು ಮುಂದೆ ಸಾಗುತ್ತಿರುವುದು ಮತಾಂತರ ತಡೆಗೆ ಮುಖ್ಯ ಕಾರಣ. ಇಂದು ಮುರುಘಾಮಠದಲ್ಲಿ ಮಾತ್ರವಲ್ಲ ಎಲ್ಲ ಮಠಗಳಲ್ಲು ಇಂತಹ ಬದಲಾವಣೆ ಇರಬೇಕೆಂದರು.

ಶ್ರೀ ಶಾಂತವೀರ ಸ್ವಾಮಿಗಳು ಕೊಳದಮಠ ಬೆಂಗಳೂರು, ಹೊಸದುರ್ಗದ ಡಾ. ಶಾಂತವೀರ ಸ್ವಾಮಿಗಳು, ಶ್ರೀ ವೇಮನಾನಂದ ಸ್ವಾಮಿಗಳು, ಶ್ರೀ ಬಸವಕುಮಾರ ಸ್ವಾಮಿಗಳು, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು ಸೇರಿದಂತೆ ನೂರಾರು ಸ್ವಾಮಿಗಳು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಇದುವರೆಗೂ ಧರ್ಮಸಂಸತ್ ಪ್ರಧಾನ ಕಾರ್ಯದರ್ಶಿಯಾಗಿದ್ದ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮಿಗಳು ಹೊಸದಾಗಿ ಪರಿವರ್ತನಪರ ಧರ್ಮಸಂಸತ್‌ನ ಪ್ರಧಾನಕಾರ್ಯದರ್ಶಿಯಾಗಿ ನೇಮಕಗೊಂಡ ಶ್ರೀ ಬಸವಮೂರ್ತಿ ಮಾದಾರಚೆನ್ನಯ್ಯ ಸ್ವಾಮಿಗಳು ಅಧಿಕಾರ ಹಸ್ತಾಂತರಿಸಿದರು. ಮುಂದಿನ ಧರ್ಮಸಂಸತ್ ಸಭೆಯನ್ನು ಯಾದಗಿರಿ ಜಿಲ್ಲೆ ಗುರುಮಠಕಲ್‌ನ ಶ್ರೀ ಖಾಸಾಮುರುಘಾಮಠದಲ್ಲಿ ನಡೆಸಲು ಹಾಗು ಏಪ್ರಿಲ್-11 ರಂದು ಡಾ. ಶಿಮುಶ ಸಮಾನತೆ ದಿನವನ್ನಾಗಿ ಆಚರಿಸಲು, ತೀರ್ಮಾನಿಸಿ ನಿರ್ಣಯ ಕೈಗೊಳ್ಳಲಾಯಿತು.





